ಚೆನ್ನವೀರ ನಾಲ್ವಾಡ, ಚಿಕ್ಕೇನಕೊಪ್ಪ

ಮನೋಧರ್ಮದಂತೆ ನಡೆಯಲು ಯಾವಾಗ ಸಾಧ್ಯ?



ಮನೋಧರ್ಮವೇ ಮನದನ್ನೆಯ ಧರ್ಮವೂ ಆದಾಗ.

ಜಿ.ಆರ್. ಪುರಾಣಿಕ್, ಬೀಜಾಡಿ

ಹಾಲ್ ಟಿಕೆಟ್‌ಗೂ, ಚುನಾವಣಾ ಟಿಕೆಟ್‌ಗೂ ವ್ಯತ್ಯಾಸವೇನು?

ಇದು ಪ್ರವೇಶಪತ್ರ; ಅದು ಆವೇಶಪತ್ರ.

ಕುಮಾರ ಚಲವಾದಿ, ಹಾಸನ

ನಾನು ನಗುತ್ತಿದ್ದರೂ ನನ್ನಾಕೆ 'ಮುನಿಸು ತರವೇ' ಎಂದೇಕೆ ಹಾಡಿಕೊಳ್ಳುತ್ತಿರುತ್ತಾಳೆ?

ಓಹ್! ಬಿರುಗಾಳಿಯ ಮುನ್ಸೂಚನೆ. ಆ ಹಾಡು ಸ್ವಂತಕ್ಕಾಗಿ. ನಿಮ್ಮ ನಗೆ ಆಕೆಗೆ ಕ್ರೋಧ ತರಿಸುತ್ತಿದೆ!

ಅಮರಯ್ಯಾ ಪತ್ರಿಮಠ, ಸುರಪುರ

ಕಳ್ಳರಿಗೆ ಕತ್ತಲೆ ಎಂದರೆ ಇಷ್ಟ. ಸುಳ್ಳರಿಗೆ?

ಖಾಲಿ ತಲೆ ಎಂದರೆ!

ಕೆ.ಹೆಚ್. ರಾಮಕೃಷ್ಣಾರೆಡ್ಡಿ, ಬೆಂಗಳೂರು

ನದಿ ಯಾವಾಗಲೂ ಹರಿಯುತ್ತಲೇ ಇರುತ್ತದೆ. ಸುಸ್ತಾಗುವುದಿಲ್ಲವೆ?



ಅಪ್ ಹತ್ತಲ್ಲವಲ್ಲ; ಜಾರೋಬಂಡೆ ತರಹ ಬರೀ ಡೌನ್‌ಗೇ ಹೋದರೆ ಸುಸ್ತಾಗಲ್ಲ.

ಪಿ.ಜೆ. ರಾಘವೇಂದ್ರ, ಮೈಸೂರು

ಅತ್ಯಾಚಾರಿಗಳಂತೆ ಭ್ರಷ್ಟಾಚಾರಿಗಳೂ ಎನ್ಕೌಂಟರ್‌ಗೆ ಬಲಿಯಾಗುವಂತಿದ್ದರೆ?

ದೇಶದ ಶೇ.20 ಜನ ಭ್ರಷ್ಟರು ಎಂದುಕೊಂಡರೂ 28 ಕೋಟಿ ಗುಂಡುಗಳು ಬೇಕಾಗುತ್ತವೆ.

ಸವಿತಾ ರವಿ ಸುಟ್ಟಟ್ಟೆ, ಬನಹಟ್ಟಿ

ಧಾರಾವಾಹಿಯಲ್ಲಿ ಒಬ್ಬ ನಾಯಕನಿಗೆ ಇಬ್ಬರು ನಾಯಕಿಯರಿರುವ ಪಾತ್ರವೇ ಹೆಚ್ಚಾಗಿದೆಯಲ್ಲಾ...?

ಗಂಡಿನ ಸುಪ್ತ ಆಸೆ, ಹೆಣ್ಣಿನ ಸುಪ್ತ ಕ್ರೋಧವನ್ನು ಕೆರಳಿಸಿ ಸೀರಿಯಲ್‌ಗೆ ಸೆಳೆಯುವ ತಂತ್ರವದು.

ಕೌಡ್ಲೆ ರವಿ, ಬೆಂಗಳೂರು

ಖಾಲಿ ಸೈಟಿಗೆ ಬೆಲೆ ಜಾಸ್ತಿಯಂತೆ. ಹಾಗೆಯೇ ಖಾಲಿ (ಕೂದಲಿಲ್ಲದ) ತಲೆಯವರಿಗೆ ಬುದ್ಧಿ ಜಾಸ್ತಿ. ಏನಂತೀರಾ?

ಆ ತಲೆ ಹೇಗಿದೆಯೋ ನೋಡಿ; ಕೊಡ/ಕಲಶದಂತಿದ್ದರೆ ಮಣಗಟ್ಟಲೆ ಗುಣ; ಚೊಂಬಾದರೆ ಭಣಭಣ.

ಎಂ.ಎಸ್. ಉಷಾ ಪ್ರಕಾಶ್, ಮೈಸೂರು

ಲಂಚಗುಳಿಗೂ, ಕಳ್ಳನಿಗೂ ವ್ಯತ್ಯಾಸವೇನು? ಹೆಚ್ಚು ಆಸೆ ಯಾರಿಗೆ ಇರುತ್ತದೆ?

ಕಳ್ಳನಿಗೆ ಆಸೆ ಹೆಚ್ಚು, ಭ್ರಷ್ಟನಿಗೆ ಅವಕಾಶ ಹೆಚ್ಚು; ಲಂಚಗುಳಿ ಜನ, ಇಲಾಖೆ ಎರಡನ್ನೂ ದೋಚುವ ಡಬಲ್ ಕಳ್ಳ.

ಸುಲೋಚನ ಜಿ. ರಾವ್, ಬೆಂಗಳೂರು

ಅತ್ತೆಯನ್ನು ತಾಯಿಯಂತೆ, ಸೊಸೆಯನ್ನು ಮಗಳಂತೆ ನೋಡಿಕೊಂಡರೆ ಸಂಸಾರ ಸಂಗೀತದಂತಿರುತ್ತದಂತೆ. ಹಾಗೆಂದರೆ?

ಯಾರೇನೇ ರಾಗ ಎತ್ತಿದರೂ ಅನುಸರಿಸಿ ತಾಳಬೇಕು ಎಂದು.

ವಿ. ಹಮೀದ್, ವಿಟ್ಲ

ವಿದ್ಯುತ್ ಪವರ್‌ಗೂ, ಸ್ತ್ರೀ ಪವರ್‌ಗೂ ಇರುವ ವ್ಯತ್ಯಾಸವೇನು?

ವಿದ್ಯುತ್ ಪವರ್‌ಗೆ ರೆಸಿಸ್ಟೆನ್ಸ್ ಹೆಚ್ಚು.

ಫಾಲನೇತ್ರ ಸಜ್ಜನ, ಶಿರಸಿ

ನದಿಗಳ ಜೋಡಣೆಯಂತೆ ಮನುಜರೆಲ್ಲರ ಮನಸ್ಸಿನ ಜೋಡಣೆಯೂ ಮುಖ್ಯವಲ್ಲವೆ?

ನಿಜ. ಆದರೆ ಜಾತಿಕಣಿವೆಯ ದಡಗಳು ಸೇತುವೆ ಕಟ್ಟಲಾಗದಷ್ಟು ದುರ್ಬಲ.

ಬಾಳ್ಳುಪೇಟೆ ನೀಲಕಂಠಪ್ಪ, ಹಾಸನ

ಎಲೆಕ್ಷನ್ ನಂತರ ಮೆಜಾರಿಟಿ ತೋರಿಸುವುದಕ್ಕಿಂತ ಮೊದಲೇ ಹರಾಜು ಮಾಡ್ಕೊಂಡ್ರೆ ಸುಮಾರು ಖರ್ಚು ಉಳಿಯುತ್ತಲ್ವಾ?

ಆಗದು. ಶಾಸಕರ ಮಿನಿಮಮ್ ಬಿಡ್ ನಿರ್ಧಾರವಾಗುವುದೇ ಅತಂತ್ರ ಉದ್ಭವಿಸಿದ ಮೇಲೆ.

## ಬಹುಮಾನಿತ ಪ್ರಶ್ನೆ

ವಿಜಯ್‌ಕುಮಾರ್ ಎಚ್.ಕೆ. ರಾಯಚೂರು

ಮನುಷ್ಯತ್ವವನ್ನೇ ಕೊಲ್ಲುವ 'ಜಾತಿ' ಎಂಬ ವ್ಯಾಧಿಗೆ ಮದ್ದು ಇದೆಯೆ?

'ಜಾತಿ'ಯದು ಡಯಾಬಿಟಿಸ್, ಬಿಪಿಗಳ ಜಾತಿ; ನಿವಾರಿಸಲಾಗದು, ನಿಯಂತ್ರಿಸಬಹುದಷ್ಟೆ.

ರಮೇಶ್, ಹನುಮನಾಳು

ಬಿಡುವಿಲ್ಲದ ಕೆಲಸವೆಂದರೆ ಯಾವುದು ಗುರುವೆ?

ನೆಗಡಿಯಿಂದ ಮೂಗು ಕಟ್ಟಿರುವ ತಂಟೆಕೋರ ಮಗುವನ್ನು ನೋಡಿಕೊಳ್ಳುವುದು.

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ

ಮೊಬೈಲ್, ವೈರ್‌ಲೆಸ್ ಇಲ್ಲದ ಕಾಲದಲ್ಲಿ ಕೃಷ್ಣನಿಗೆ ದ್ರೌಪದಿಯ ಕೂಗು ಹೇಗೆ ತಲುಪಿತು ರಾಂ?

ಅಜಮಿಳನ ಕೂಗು ಹರಿಗೆ ತಲುಪಿದಂತೆಯೇ... ಆಗ 'ಭಕ್ತಿ 24/7' ಎಂಬ ಅಘೋಷಿತ ಚಾನಲ್ ಇತ್ತಂತೆ.

ಬಿ. ಶ್ರೀನಾಥ, ಮೈಸೂರು

ಇತ್ತೀಚೆಗೆ ಹುಡುಗಿಯರು ಜಡೆ ಹಾಕಿಕೊಳ್ಳುವುದನ್ನು ಬಿಟ್ಟು, ಕೂದಲನ್ನು ಹರಡಿಕೊಂಡಿರುತ್ತಾರಲ್ಲ, ಏಕೆ?



ಎಡಗೈಯನ್ನು windshield wiper ನಂತೆ ಬಳಸಿ ಕೇಶವನ್ನು ಆಗಾಗ್ಗೆ ಹಿಂತಳ್ಳುವುದು ಫ್ಯಾಷನ್ ಆಗಿರುವುದರಿಂದ.

ಬಿ.ಎನ್. ಸೊಲ್ಲಾಪುರ, ಬೀದರ್

mummy ಎಂದಾಗ ಸುಗಂಧದ್ರವ್ಯಲೇಪಿತ ಶವದ, madam ಎಂದಾಗ mad ಅಮ್ಮನ ನೆನಪು ಬರುವುದೇಕೆ?

ಸದ್ಯ! 'ಅಮ್ಮ' ಎಂದರೆ ಸಿಡುಬು, ದಡಾರ ನೆನಪಿಗೆ ಬಾರದಲ್ಲ! ಕರುಳಿಗಿಂತ ಕೊರಳಿಗೆ ಲಕ್ಷ್ಯವಿತ್ತ ಫಲವಿದು.

■ ರಾಮ್